# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1124

ಸದಸ್ಯರ ಹೆಸರು : ಶ್ರೀ ಡಿ.ಎಸ್ ಅರುಣ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 18-12-2024

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅನಾವೃಷ್ಟಿಯಿಂದ ಸಂಭವಿಸಿದ ಬೆಳೆ ಹಾನಿ, ಪ್ರಾಣ ಹಾನಿ, ಮನೆ ಹಾನಿಗಳ ಪ್ರಮಾಣವನ್ನು ಸರ್ಕಾರ ಗುರುತಿಸಿದೆಯೇ; | 2024-25ನೇ ಸಾಲಿನಲ್ಲಿ ರಾಜ್ಯದಲ್ಲಿ ಅನಾವೃಷ್ಟಿಯಿಂದ ಯಾವುದೇ ಜಾನುವಾರುಗಳು ಮರಣ ಹೊಂದಿರುವುದಿಲ್ಲ. |
| ಆ) | ಅನಾವೃಷ್ಟಿಯಿಂದ ಸಂಭವಿಸಿದ ಅನಾಹುತಗಳನ್ನು ಎದುರಿಸುವಲ್ಲಿ ಸರ್ಕಾರ ಕೈಗೊಂಡು ಕ್ರಮಗಳೇನು; | ರಾಜ್ಯದಲ್ಲಿ ಅನಾವೃಷ್ಟಿ ಉಂಟಾಗಬಹುದಾದ ಸಂದರ್ಭಗಳಲ್ಲಿ ದುಷ್ಪಾರಿಣಾಮಗಳನ್ನು ತಡೆಗಟ್ಟಲು ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಮತ್ತು ಸಿದ್ದತಾ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸುತ್ತೋಲೆ ಮುಖಾಂತರ ಸೂಚಿಸಲಾಗಿದೆ.<br><br>2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಬರ ಘೋಷಿತ ಜಿಲ್ಲೆಗಳಲ್ಲಿ ಜಾನುವಾರುಗಳ ಸಂರಕ್ಷಣೆಗಾಗಿ ಜಾನುವಾರು ಶಿಬಿರಗಳು ಮತ್ತು ಮೇವು ನಿಧಿಗಳನ್ನು ಸ್ಥಾಪಿಸಲಾಗಿತ್ತು. ರಾಜ್ಯದಲ್ಲಿ ಒಟ್ಟಾರೆಯಾಗಿ 4 ಜಿಲ್ಲೆಗಳಲ್ಲಿ 30 ಜಾನುವಾರು ಶಿಬಿರಗಳನ್ನು (ಚಾಮರಾಜನಗರ-18, ಚಿತ್ರದುರ್ಗ-10, ರಾಮನಗರ-1, ವಿಜಯನಗರ-1) ಆರಂಭಿಸಿ 19473 ಜಾನುವಾರುಗಳಿಗೆ 6628.7 ಮೆಟ್ರಿಕ್ ಟನ್ ಮೇವನ್ನು ಒದಗಿಸಿ ಆಶ್ರಯ ಕಲ್ಪಿಸಲಾಗಿತ್ತು.<br><br>ರಾಜ್ಯದಲ್ಲಿ 9 ಜಿಲ್ಲೆಗಳಲ್ಲಿ 77 ಮೇವು ನಿಧಿ (FODDER DEPOTS) ಗಳನ್ನು (ಗದಗ-30, ತುಮಕೂರು-21, ಬೆಳಗಾವಿ-9, ಧಾರವಾಡ-7, ರಾಮನಗರ-3, ಬಳ್ಳಾರಿ-2, ವಿಜಯನಗರ-2, |

| | | |
|---|---|---|
| | | ವಿಜಯಪುರ-2, ಚಾಮರಾಜನಗರ-1) ಆರಂಭಿಸಿ 50673 ರೈತರಿಗೆ ರಿಯಾಯಿತಿ ದರದಲ್ಲಿ ಒಟ್ಟು 7292.65 ಟನ್ ಒಣ ಮೇವನ್ನು ಒದಗಿಸಲಾಗಿರುತ್ತದೆ.<br><br>2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಬರ ಘೋಷಿತ ಜಿಲ್ಲೆಗಳಲ್ಲಿ ಮೇವು ಉತ್ಪಾದನೆ ಹೆಚ್ಚಿಸಲು 1157057 ಮಿನಿಕಿಟ್‌ಗಳನ್ನು ಉಚಿತವಾಗಿ ರೈತರಿಗೆ ವಿತರಿಸಲಾಗಿದೆ. ಇದರಿಂದ ಅಂದಾಜು 31.51 ಲಕ್ಷ ಮೇಟ್ರಿಕ್ ಟನ್ ಮೇವು ಉತ್ಪಾದನೆಯಾಗಿರುತ್ತದೆ. |
| ಇ) | ಬೆಳೆ ಹಾನಿ, ಪ್ರಾಣ ಹಾನಿ ಮತ್ತು ಜನ ಹಾಗೂ ಜಾನುವಾರುಗಳ ಹಾನಿಗೆ ಸಂಬಂಧಿಸಿದಂತೆ ಆರ್ಥಿಕವಾಗಿ ಪರಿಹಾರ ಒದಗಿಸಲಾಗಿದೆಯೇ; | ಅನಾವೃಷ್ಟಿಯಿಂದ ಜಾನುವಾರುಗಳು ಮರಣ ಹೊಂದಿರುವುದಿಲ್ಲ. |
| ಈ) | ಈವರೆಗೆ ಎಷ್ಟು ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಜಾನುವಾರುಗಳು ಮರಣ ಹೊಂದಿರದ ಕಾರಣ ಯಾವುದೇ ಪರಿಹಾರವನ್ನು ಬಿಡುಗಡೆ ಮಾಡಿರುವುದಿಲ್ಲ. |

**ಇ- ಪಸಂಮೀ 325 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**